International Journal for Multidisciplinary Research (IJFMR)
E-ISSN: 2582-2160 ● Website: www.ijfmr.com ● Email: editor@ijfmr.com

ರನ್ನನ ದುರ್ಯೋಧನ: ಒಂದು ಅವಲೋಕನ

ಶ್ರೀ. ರಾಮಣ್ಣ
ಸಹಾಯಕ ಪ್ರಾಧ್ಯಾಪಕರು,
ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು, ಯಾದಗಿರಿ, 585202.

ಸಾರಾಂಶ

ಕನ್ನಡ ಸಾಹಿತ್ಯದ ರತ್ನತ್ರಯರಲ್ಲಿ ಒಬ್ಬನಾದ ಮಹಾಕವಿ ರನ್ನನು (ಕ್ರಿ.ಶ. 949) ರಚಿಸಿದ 'ಸಾಹಸಭೀಮ ವಿಜಯಂ' ಅಥವಾ 'ಗದಾಯುದ್ಧ' ಕಾವ್ಯದಲ್ಲಿ, ತನ್ನ ಆಶ್ರಯದಾತ ಚಾಲುಕ್ಯ ಸತ್ಯಾಶ್ರಯನನ್ನು ಭೀಮನಿಗೆ ಹೋಲಿಸಿ ಭೀಮನನ್ನೇ ನಾಯಕನನ್ನಾಗಿ ಮಾಡಿದ್ದಾನೆ. ಆದರೂ ಕಾವ್ಯದುದ್ದಕ್ಕೂ ಓದುಗರ ಮನದಲ್ಲಿ ಉಳಿಯುವುದು ಪ್ರತಿನಾಯಕನಾದ ದುರ್ಯೋಧನನೇ. ಈ ಲೇಖನವು ರನ್ನನು ದುರ್ಯೋಧನನನ್ನು ಮಹಾಭಾರತದ ಸಾಂಪ್ರದಾಯಿಕ ಖಳನಾಯಕನನ್ನಾಗಿ ಚಿತ್ರಿಸದೆ, ಉದಾತ್ತ ಗುಣಗಳುಳ್ಳ 'ದುರಂತ ನಾಯಕ'ನನ್ನಾಗಿ ರೂಪಿಸಿರುವ ಬಗೆಯನ್ನು ಅವಲೋಕಿಸುತ್ತದೆ. ಕವಿ ಮತ್ತು ಕಾವ್ಯದ ಪರಿಚಯದ ನಂತರ, 'ಛಲದಂಕಮಲ್ಲ'ನ ಸ್ವಾಭಿಮಾನ, ಕರ್ಣನೊಂದಿಗಿನ ಆದರ್ಶ ಮಿತ್ರತ್ವ, ಕರ್ಣ-ದುಶ್ಶಾಸನ-ಲಕ್ಷಣಕುಮಾರರ ಸಾವಿಗೆ ಮಿಡಿಯುವ ವಿಲಾಪದಲ್ಲಿನ ಕರುಣರಸ, ಗದಾವೀರತ್ವ ಹಾಗೂ ಕೊನೆಯ ಕ್ಷಣದ ಮಾನಸಿಕ ದ್ವಂದ್ವಗಳನ್ನು ವಿಶ್ಲೇಷಿಸಲಾಗಿದೆ. ದುರ್ಯೋಧನನು ಕೇವಲ ತಪ್ಪುಗಳ ಮೂಟೆಯಲ್ಲ; ಅಹಂಕಾರ-ಹಠಗಳಿಗಿಂತ ಸ್ವಾಭಿಮಾನ, ಸ್ನೇಹಪರತೆ ಮತ್ತು ವೀರತ್ವ ಮಿಗಿಲಾಗಿ ಎದ್ದು ಕಾಣುತ್ತವೆ; ಹೀಗೆ ರನ್ನನು ಅವನನ್ನು ಓದುಗರಲ್ಲಿ ಸಹಾನುಭೂತಿ ಮತ್ತು ಗೌರವ ಮೂಡಿಸುವ ಅಮರ ದುರಂತ ನಾಯಕನನ್ನಾಗಿಸಿದ್ದಾನೆ ಎಂಬುದು ಈ ಲೇಖನದ ತೀರ್ಮಾನ.

ಪ್ರಮುಖ ಪದಗಳು: ರನ್ನ, ಗದಾಯುದ್ಧ (ಸಾಹಸಭೀಮ ವಿಜಯಂ), ದುರ್ಯೋಧನ, ದುರಂತ ನಾಯಕ, ಪ್ರತಿನಾಯಕ, ಛಲದಂಕಮಲ್ಲ, ಕರುಣರಸ, ಕನ್ನಡ ಮಹಾಕಾವ್ಯ

ರಾಮಾಯಣ ಮಹಾಭಾರತ ಮಹಾಕಾವ್ಯಗಳು ಭಾರತೀಯರ ಜೀವನಾಡಿಯಾಗಿ ಜನರ ಜೊತೆ ಬೆರೆತುಕೊಂಡು ಆ ಕಾವ್ಯಗಳಲ್ಲಿರುವ ನಾಯಕರಂತೆ ಪರಿಶುದ್ಧವಾಗಿ ಬದುಕನ್ನು ನಡೆಸಬೇಕು ಮತ್ತು ಸಮಾಜವು ಕೂಡಾ ಅದರಂತೆ ನಡೆದುಕೊಳ್ಳಬೇಕು ಎಂದು ಪ್ರತಿಯೊಬ್ಬ ಭಾರತೀಯ ಬಯಸುವಂತಹದ್ದು ಸರ್ವೇ ಸಾಮಾನ್ಯ. ಆದರೆ ಆ ಮಹಾಕಾವ್ಯಗಳಲ್ಲಿ ಉದಾತ್ತ ಪಾತ್ರಗಳು ಎನಿಸಿಕೊಂಡ ನಾಯಕರು ಮಾಡುವ ಕೆಲವು ವಿಚಾರಕ್ಕೆ ಸಂಬಂಧಿಸಿದಂತೆ ಇಂದಿನ ಕಾವ್ಯಲೋಕವ ಹೇಗೆ ಅವರನ್ನು ಅರ್ಥೈಸಿಕೊಂಡು ಪುನಃ ಮಹಾಕಾವ್ಯಗಳನ್ನು ಮುರಿದು ಕಟ್ಟುವಂತಹ ಕಾರ್ಯ ಮಾಡುತ್ತಲೇ ಬಂದಿವೆ ಎಂಬುದು ಚರ್ಚಿತ ವಿಷಯಗಳಾಗಿವೆ. ಅದರಲ್ಲಿ ರಾಮ ಮತ್ತು ಕೃಷ್ಣ. ಹಾಗೆಯೇ ಧರ್ಮರಾಜ, ಅರ್ಜುನ, ಭೀಮ ಇವರೆಲ್ಲರಗಳನ್ನು ಇಟ್ಟುಕೊಂಡು ಕನ್ನಡ ಕಾವ್ಯ ಪರಂಪರೆ ಭಿನ್ನ ಭಿನ್ನವಾದ ದೃಷ್ಟಿ ನೆಲೆಯಲ್ಲಿ ನೋಡಲಾಗಿದೆ.

ಸಂಸ್ಕೃತ ಮಹಾಕವಿಗಳು ರಚನೆ ಮಾಡಿರುವ ಈ ಮಹಾಕಾವ್ಯಗಳು; ವಾಲ್ಮೀಕಿಯ ರಾಮಾಯಣ ಮತ್ತು ವ್ಯಾಸರ ಮಹಾಭಾರತ ಕಾವ್ಯಗಳಂತೂ ಜನಮಾನಸದಲ್ಲಿ ಅಚ್ಚಳಿಯದೇ ಉಳಿದುಕೊಂಡು ಹಲವಾರು

ಕವಿಗಳಿಂದ ಮರು ಹುಟ್ಟು ಪಡೆದುಕೊಂಡು ಭಾಷಾಂತರ, ರೂಪಾಂತರ, ಲಿಪ್ಯಂತರ ಮತ್ತು ಅನುವಾದಗೊಂಡು ಕನ್ನಡ ಸಾಹಿತ್ಯಲೋಕವನ್ನು ಶ್ರೀಮಂತಗೊಳಿಸಿವೆ.

ವಾಲ್ಮೀಕಿ ರಾಮನನ್ನು ನೋಡಿದ ಪರಿಯನ್ನು ನೋಡಿದರೆ; ಅಲ್ಲಿ ರಾಮ ಸಮಾಜದ ಪ್ರತಿನಿಧಿಯಾಗಿ ತಂದೆ ಹೇಳುವ ವಾಕ್ಯಗಳನ್ನು ಚಾಚುತಪ್ಪದೇ ನಡೆಸಿಕೊಟ್ಟಿರುವುದನ್ನು ಆದರ್ಶರೂಪದಿಂದ ನೋಡಲಾಗಿದೆ. ಪಿತೃ ವಾಕ್ಯದ ಪರಿಪರಿಪಾಲನೆಗಾಗಿ ಅಧಿಕಾರವನ್ನು ಬಿಟ್ಟು ಕಾಡಿಗೆ ಹೋಗಿರುವುದು ಭಾರತೀಯ ಪರಂಪರೆಯಲ್ಲಿ ಒಂದು ಆದರ್ಶ ವ್ಯಕ್ತಿಯನ್ನಾಗಿ ಕಂಡಿರುವುದು ನಮ್ಮ ಸಮಾಜ. ತಂದೆಯ ಮಾತನ್ನು ಮೀರದ ಮಗನಾಗಿ ಕಂಡುಬರುತ್ತಾನೆ. ಜೀವನದಲ್ಲಿ ಬದುಕಿದರೆ ಶ್ರೀರಾಮನಂತೆ ಬದುಕಬೇಕು ಎಂದು ಜನ ಮಾತನಾಡುವುದನ್ನು ನಾವು ನೋಡಿದ್ದೇವೆ.

ಅದರಂತೆ ರನ್ನನು ದಯೋರ್ಧನನ ಪಾತ್ರದ ಮೂಲಕ ಕನ್ನಡ ಸಾಹಿತ್ಯ ಲೋಕದಲ್ಲಿ ಗದಾಯುದ್ಧ ಕಾವ್ಯಕ್ಕೆ ಅತ್ಯುನ್ನತ ಸ್ಥಾನವಿದೆ. ರನ್ನನ ಆಶ್ರಯದಾತನಾದ ಚಾಲುಕ್ಯ ಅರಸ ಸತ್ಯಾಶ್ರಯನನ್ನು ಭೀಮನಿಗೆ ಹೋಲಿಸಿ, ಭೀಮನನ್ನು ಕಾವ್ಯದ ನಾಯಕನನ್ನಾಗಿ ಮಾಡಿದ್ದಾನೆ. ಆದರೆ, ಆಶ್ಚರ್ಯಕರ ಸಂಗತಿಯೆಂದರೆ, ಕಾವ್ಯದುದ್ದಕ್ಕೂ ಭೀಮನಿಗಿಂತಲೂ ಹೆಚ್ಚಾಗಿ ಓದುಗರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುವುದು ಪ್ರತಿನಾಯಕನಾದ ದುರ್ಯೋಧನನ ಪಾತ್ರ. ರನ್ನನು ದುರ್ಯೋಧನನ್ನು ಕೇವಲ ಮಹಾಭಾರತದ ಸಾಂಪ್ರದಾಯಿಕ ಖಳನಾಯಕನನ್ನಾಗಿ ಚಿತ್ರಿಸದೆ, ಒಬ್ಬ ಉದಾತ್ತ ಗುಣಗಳಿರುವ 'ದುರಂತ ನಾಯಕ'ನನ್ನಾಗಿ ರೂಪಿಸಿದ್ದಾನೆ.

ಕನ್ನಡ ಸಾಹಿತ್ಯ ಚರಿತ್ರೆಯ ರತ್ನತ್ರಯರಲ್ಲಿ ಒಬ್ಬನಾದ ಮಹಾಕವಿ ರನ್ನನು 10ನೇ ಶತಮಾನದ ಶ್ರೇಷ್ಠಕವಿ ಹಾಗೂ ಶಕ್ತಿಕವಿಯಂತು ಸರ್ವಥಾ ಸತ್ಯವಾಗಿದೆ. ಮಹಾಕವಿ ರನ್ನನು ಬೆಳ್ವಲ ನಾಡಿನ ಐನೂರು ಎಂಬ ಪ್ರಾಂತ್ಯದ ಜಂಬುಖಂಡಿ ಎಪ್ಪತ್ತರಲ್ಲಿ ಬರುವ ಮುದುವೊಳಲು ಎಂಬ ಗ್ರಾಮಕ್ಕೆ ಸೇರಿದವನು. ಇದು ಈಗಿನ ಬಾಗಲಕೋಟೆ ಜಿಲ್ಲೆಯ ಮುಧೋಳವೇ ಆಗಿದೆ. ಕ್ರಿ.ಶ. 949ರಲ್ಲಿ ಜಿನವಲ್ಲಭೇಂದ್ರ ಮತ್ತು ಅಬ್ಬಲಬ್ಬೆ ಉದರದಲ್ಲಿ ಜನಿಸಿದವನು. ಇವರು ಬಳಗಾರ ಕುಲಕ್ಕೆ ಸೇರಿದವರು. ದೃಢಬಾಹು, ರೇಚಣ, ಮಾರಯ್ಯ ಎಂಬುವವರು ಈತನ ಸಹೋದರರು. ಜಕ್ಕಿ ಮತ್ತು ಶಾಂತಿ ಇವರ್ಯರು ಪತ್ನಿಯರು. ರಾಯ ಮತ್ತು ಅತ್ತಿಮಬ್ಬೆ ಎಂಬ ಇಬ್ಬರು ಮಕ್ಕಳು. ಈತನ ಗುರು ಗಂಗಮಂಡಲದ ಅಜಿತಸೇನಾಚಾರ್ಯರು.

ಆರಂಭದಲ್ಲಿ ಗಂಗರ ದೊರೆ 4ನೇ ರಾಚಮಲ್ಲನ ಮಂತ್ರಿ ಚಾವುಂಡರಾಯನು ರನ್ನನ ಪೋಷಕನಾಗಿದ್ದನು. ತದನಂತರ ಚಾಲುಕ್ಯ ಚಕ್ರವರ್ತಿಗಳಾದ ಇಮ್ಮಡಿ ತೈಲಪ ಮತ್ತು ಆತನ ಪುತ್ರ ಯುವರಾಜ ಸತ್ಯಾಶ್ರಯ ಇರಿವಬೆಡಂಗರ ಆಸ್ಥಾನದಲ್ಲಿ ಕವಿಯಾಗಿದ್ದನು. ಆಶ್ರಯದಾತನಾದ ತೈಲಪನು ಚಕ್ರವರ್ತಿಯಾದ ಕಾರಣ ಈತನಿಗೆ ಕವಿ ಚಕ್ರವರ್ತಿ ಎಂಬ ಬಿರುದನ್ನು ನೀಡಿದ್ದನು. ಅದರ ಜೊತೆಗೆ ಕವಿರತ್ನ, ಅಭಿನವ ಚಕ್ರವರ್ತಿ, ಕವಿ ಕುಂಜರಾಂಕುಶ, ಉಭಯಕವಿ, ಕವಿಜನಚೂಡಾರತ್ನ, ಕವಿತಿಲಕ, ಕವಿಚತುರ್ಮುಖ ಎಂಬ ಬಿರುದುಗಳಿಗೂ ಪಾತ್ರನಾಗಿದ್ದನು. ಈ ಮೇಲಿನ ಎಲ್ಲಾ ಮಾಹಿತಿಯನ್ನು ರನ್ನನ ಕೃತಿಯಾದ ಅಜಿತಪುರಾಣದಲ್ಲಿ ತಾನೇ ಹೇಳಿಕೊಂಡಿದ್ದಾನೆ. ಕವಿ ರನ್ನನು ರಚಿಸಿರುವ ಕೃತಿಗಳೆಂದರೆ, ಅಜಿತಪುರಾಣ, ಗದಾಯುದ್ಧ, ಪರಶುರಾಮ ಚರಿತೆ, ಚಕ್ರೇಶ್ವರ ಚರಿತೆ. ಆದರೆ ನಮಗೆ ಅಜಿತಪುರಾಣ ಮತ್ತು ಗದಾಯುದ್ಧ ಕೃತಿಗಳು ಮಾತ್ರ ಲಭ್ಯವಾಗಿದ್ದು ಉಳಿದ ಎರಡು ಕೃತಿಗಳಾದ ಪರಶುರಾಮ ಚರಿತೆ ಮತ್ತು ಚಕ್ರೇಶ್ವರ ಚರಿತೆಗಳು ದೊರೆತಿಲ್ಲ.

'ವಾಗ್ದೇವಿಯ ಭಂಡಾರದ ಮುದ್ರೆಯನ್ನೊಡೆದಂ ಕವಿರತ್ನನೀತಂ' ಎಂದು ಕವಿ ತನ್ನನ್ನು ತಾನು ಹೇಳಿಕೊಳ್ಳುತ್ತಾನೆ. ರನ್ನನು ಹೀಗೆ ಹೇಳಿಕೊಳ್ಳುವುದರಲ್ಲಿ ಅರ್ಥವಿದೆ. ಅವನು ನಿಜವಾಗಿಯೂ ಸರಸ್ವತಿದೇವಿಯ ಜ್ಞಾನ ಭಂಡಾರದ ಮುದೆಯನ್ನು ಒಡೆದವನೇ ಸರಿ. ಅವನ ಮಾತಿನಲ್ಲಿ ನಿಜಾಂಶವಿದೆ. ಪಂಪ ನಡೆದ ದಾರಿಯಲ್ಲಿಯೇ ನಡೆದ ರನ್ನನು ಒಂದು ಆಗಮಿಕ ಮತ್ತೊಂದು ಲೌಕಿಕ ಕಾವ್ಯವನ್ನು ಬರೆದು ಕನ್ನಡ ಸಾಹಿತ್ಯದಲ್ಲಿ ಶಾಶ್ವತ ಸ್ಥಾನವನ್ನು ಪಡೆದುಕೊಂಡಿದ್ದಾನೆ. ಅಜಿತಪುರಾಣ ಆಗಮಿಕ ಕಾವ್ಯವಾದರೆ, ಗದಾಯುದ್ಧ ಲೌಕಿಕ ಕಾವ್ಯಕೃತಿಯಾಗಿದೆ. ಆತ ರಚಿಸಿದ 'ಸಾಹಸಭೀಮ ವಿಜಯಂ' ಅಥವಾ 'ಗದಾಯುದ್ಧ' ಕೃತಿಯಾಗಿದೆ. ವ್ಯಾಸಭಾರತದ ಗದಾಸೌಪ್ತಿಕ ಪರ್ವದ ಕಥಾನಕವೇ ಈ ಕೃತಿಯ ಕಥೆಯಾಗಿದೆ. ಈ ಗದಾಯುದ್ಧವು ಪಂಪನ ವಿಕ್ರಮಾರ್ಜುನ ವಿಜಯದ 13ನೇ ಆಶ್ವಾಸದ ಗದಾಯುದ್ಧ ಪ್ರಸಂಗವನ್ನು ಗಮನದಲ್ಲಿಟ್ಟುಕೊಂಡು ಕನ್ನಡ ಸಾಹಿತ್ಯಕ್ಕೊಂದು ಸುಂದರ ಕೃತಿಯನ್ನು ನೀಡಿದ್ದಾನೆ. ರನ್ನನ ಈ ಕೃತಿಗೆ ಸಂಸ್ಕೃತ ನಾಟಕಗಳಾದ ಭಾಸನ 'ಊರುಭಂಗ' ಮತ್ತು ಭಟ್ಟನಾರಾಯಣನ 'ವೇಣಿಸಂಹಾರ' ಕೃತಿಗಳ ಪ್ರಭಾವವು ಇದೆ. ರನ್ನನ ಆಶ್ರಯದಾತನಾದ ಸತ್ಯಾಶ್ರಯ ಇರಿವಬೆಡಂಗನನ್ನು ಭೀಮನೊಂದಿಗೆ ಹೋಲಿಸಿ ಈ ಕಾವ್ಯ ರಚಿಸಿರುವುದು ಈ ಕೃತಿಯ ಮತ್ತೊಂದು ವಿಶೇಷ.

'ಕೃತಿ ನೆಗಳ ಗದಾಯುದ್ಧಂ
ಕೃತಿಗೀಶ್ವರ ಚಕ್ರವರ್ತಿ ಸಾಹಸಭೀಮಂ
ಕೃತಿಯಂ ವಿರಚಿಸಿದನಲಂ
ಕೃತಿಯಂ ಕವಿರತ್ನದೆಂದೊಡೇವಣ್ಣಿಪುದೋ' (ಗದಾಯುದ್ಧ 1-23)

ಕೃತಿಯನ್ನು ಕುರಿತು ಮತ್ತು ತನ್ನ ಕವಿತಾಶಕ್ತಿಯನ್ನು ಕುರಿತು ರನ್ನನು ಈ ಸುಂದರವಾದ ಕೃತಿಯ ಹೆಸರು ಗದಾಯುದ್ಧವೆಂದು ಇದಕ್ಕೆ ಚಕ್ರವರ್ತಿಯಾದ ಸಾಹಸಭೀಮನೆ ಇದರ ನಾಯಕ, ಸಾಹಿತ್ಯಕ್ಕೆ ಅಲಂಕಾರದಂತಿರುವ ಈ ಕೃತಿಯನ್ನು ರಚಿಸಿದವನು ಕವಿರತ್ನ ಎಂದರೆ, ರನ್ನ ಎಂದು ತನ್ನನ್ನು ತನೇ ಹೊಗಳಿಕೊಂಡಿದ್ದಾನೆ. ಈ ಹೊಗಳಿಕೆಯ ಮಾತಿನಲ್ಲಿ ಸತ್ಯಾಂಶವಿದೆ. ಏಕೆಂದರೆ ಈ ಕೃತಿಯು ಕನ್ನಡ ಸಾಹಿತ್ಯದ ಅಜರಾಮರ ಕೃತಿಗಳ ಸಾಲಿನಲ್ಲಿ ಮೊದಲಿಗೆ ನಿಲ್ಲುತ್ತದೆಯೂ ಕೂಡ.

ರನ್ನ ಕವಿ ರತ್ನತ್ರಯರಲ್ಲಿ ಮೂರನೆಯವನು. ಕವಿರತ್ನ ಅಂದರೆ ರನ್ನ.

ಕವಿಜನದೊಳ್ ರತ್ನತ್ರಯ
ಪವಿತ್ರಮೆನೆ ನೆಗಳ ಪಂಪನುಂ ಪೊನ್ನಿಗನುಂ
ಕವಿರತ್ನನುಮೀ ಮೂವರ್
ಕವಿಗಳ ಜಿನಸಮಯದೀಪಕರ್ ಪೆರರೊಳರೆ?

ಎಂದು ಪಂಪ, ಪೊನ್ನ, ತಾನು ಈ ಮೂವರು ರತ್ನತ್ರಯರೆಂದು ಹೆಮ್ಮೆಯಿಂದ ಹೇಳಿಕೊಂಡವನು ರನ್ನನೇ. ಈ ಹೆಮ್ಮೆ ಒಣಹೆಮ್ಮೆಯಲ್ಲ. ಸ್ವಂತದ ಹಿರಿಮೆಯನ್ನರಿತು ಹೇಳಿಕೊಳ್ಳುವ ಗುಣ ರನ್ನನ ಮನಃಪ್ರಕೃತಿಗೆ ಸಹಜವಾದದ್ದು, ಎಂದು ರಂ.ಶ್ರೀ.ಮುಗುಳಿಯವರು ತಮ್ಮ ಕನ್ನಡ ಸಾಹಿತ್ಯ ಚರಿತೆ ಕೃತಿಯಲ್ಲಿ ಅಭಿಮಾನದಿಂದ ತನ್ನ ಎಂತಹವನು ಎಂದು ತನ್ನ ಬಗ್ಗೆ ತಾನೇ ಹೇಳಿಕೊಂಡಿದ್ದಾನೆ. ಕವಿಜನಗಳಲ್ಲಿ ರತ್ನತ್ರಯರು ಎಂದು ಹೆಸರು ಪಡೆದಿರುವರು ಪಂಪ ಪೊನ್ನ ರನ್ನರು ಈ ಮೂವರೇ ಪವಿತ್ರವಾದ

ಜೈನಧರ್ಮವನ್ನು ಉದ್ಧರಿಸುವವರು, ಅವರನ್ನು ಹೊರತು ಪಡಿಸಿ ಇನ್ನು ಯಾರಾದರೂ ಇದ್ದಾರಯೇ ಎಂದು ಸಾಹಿತ್ಯಲೋಕವನ್ನು ಪ್ರಶ್ನೆ ಮಾಡುತ್ತಾನೆ.

ಜೊತೆಗೆ ಈ ಕೃತಿಯನ್ನು ಯಾವ ಆಯಾಮದಿಂದ ರಚನೆ ಮಾಡಿದ್ದೇನೆ ಎಂದು ರನ್ನ ಈ ಕೆಳಗಿನಂತೆ ಹೇಳಿಕೊಂಡಿದ್ದಾನೆ.

ಒಳಪೊಕ್ಕು ನೋಡೆ ಭಾರತ
ದೊಳಗಣ ಕಥೆಯಲ್ಲಮೀ ಗದಾಯುದ್ಧದೊಳಂ
ತೊಳಕೊಂಡಿತ್ತೆನೆ ಸಿಂಹಾ
ವಲೋಕನಕ್ರಮದಿನರುಪಿದಂ ಕವಿರತ್ನಂ

ಎಂಬಲ್ಲಿ ಹೇಳಿದ ಸಿಂಹಾವಲೋಕನಕ್ರಮವು ಒಂದು ವಿಭಿನ್ನವಾದ ನೆಲೆಯಲ್ಲಿ ಕಥೆಯನ್ನು ಅರುಹಿದ್ದಾನೆ. ಹಿನ್ನೋಟದಿಂದ ಪೂರ್ವಕಥೆಯ ಮುಖ್ಯಘಟನೆಗಳ ನಿವೇದನೆಯನ್ನು ಕಾಣಬಹುದಾಗಿದೆ. ಅದನ್ನು ಸ್ವತಃ ರನ್ನ ಕವಿಯೇ ಈ ಕೃತಿಯಲ್ಲಿ ಈ ಮೇಲಿನಂತೆ ಅಭಿಮಾನದಿಂದ ಹೇಳಿಕೊಂಡಿದ್ದಾನೆ.

ಈ ಕಾವ್ಯದಲ್ಲಿ ಭೀಮನು ಕಾವ್ಯನಾಯಕನಾಗಿದ್ದರೂ, ಇಡೀ ಕಾವ್ಯದ ತುಂಬಾ ಆವರಿಸಿಕೊಂಡು ಓದುಗರ ಮನಸ್ಸನ್ನು ಗೆಲ್ಲುವುದು ಪ್ರತಿನಾಯಕನಾದ ದುರ್ಯೋಧನ. ಮಹಾಭಾರತದ ಯುದ್ಧದ ಕೊನೆಯ ದಿನದ ಘಟನೆಗಳನ್ನು ಆಧರಿಸಿದ ಈ ಕಾವ್ಯದಲ್ಲಿ ದುರ್ಯೋಧನನ ಪತನ ಮತ್ತು ಅವನ ವ್ಯಕ್ತಿತ್ವದ ವಿಶ್ಲೇಷಣೆಯೇ ಕಾವ್ಯದ ಜೀವಾಳವಾಗಿದೆ.

ಕುರುಕ್ಷೇತ್ರ ಯುದ್ಧ ಹದಿನೆಂಟು ದಿನಗಳ ಕಾಲ ನಡೆದ ಘನಘೋರ ಕಾಳಗ, ಲಕ್ಷಾಂತರ ಜನರ ಪ್ರಾಣ ಹಾನಿ ಘಟಾನುಘಟಿಗಳ ಪರಾಕ್ರಮ, ವೀರ, ಶೌರ್ಯವನ್ನು ಕಂಡಿರುವ ಕಥೆ. ಹದಿನೇಳು ದಿನಗಳ ಕುರುಕ್ಷೇತ್ರ ಕದನ ಮುಕ್ತಾಯದ ನಂತರ ತನ್ನವರನ್ನು ಕಳೆದುಕೊಂಡಿರುವ ದುರ್ಯೋಧನ ಮುಂದಿನ ದಾರಿಯನ್ನು ಕಾಣದೇ ಭೀಷ್ಮರ ಸಲಹೆ ಪಡೆಯಲು ಸಂಜಯನ ಸಹಾಯದಿಂದ ಕುರುಕ್ಷೇತ್ರದ ರಣರಂಗದಲ್ಲಿ ನಡೆಯುತ್ತಾ ಬರುತ್ತಿರುವ ಸನ್ನಿವೇಶದೊಂದಿಗೆ ಕಥೆ ಬಿಚ್ಚಿಕೊಳ್ಳುತ್ತದೆ. ಕೊನೆಯ ದಿನದ ಗದಾಯುದ್ಧವು ಭೀಮ ಮತ್ತು ದುರ್ಯೋಧನರ ನಡುವಿನ ಕಾಳಗ ರನ್ನನ ಕವಿತಾಶಕ್ತಿಯಲ್ಲಿ ವೀರರಸದಲ್ಲಿ ಮಿಂದೆದ್ದಿದೆ. ಪರಸ್ಪರ ಹೊಡೆದಾಟದಲ್ಲಿ ಭೀಮನ ಕೈ ಮೇಲಾಗಿ ದುರ್ಯೋಧನ ಸೋಲುತ್ತಾನೆ. ರನ್ನನು ಸುಯೋಧನನ ಮರಣದ ಸಮಯವನ್ನು 'ಕುರುಕುಲಾರ್ಕನುಮರ್ಕನುಮಸ್ತಮೆಯ್ದಿದರ್' ಎಂದು ಹೇಳುತ್ತಾ ಕುರುಕುಲಕ್ಕೆ ಸೂರ್ಯನಾದ ಕೌರವನು ನಿಜವಾದ ಸೂರ್ಯನು ಪಶ್ಚಿಮ ದಿಕ್ಕಿನಲ್ಲಿ ಅಸ್ತಂಗತರಾದರೆಂದು ಹೇಳುತ್ತಾನೆ.

ಛಲದಂಕಮಲ್ಲ ಮತ್ತು ಅಪ್ರತಿಮ ಸ್ವಾಭಿಮಾನಿ:-

ದುರ್ಯೋಧನ ಎಂದರೆ, ಛಲದ ಇನ್ನೊಂದು ಹೆಸರು. ಆತ 'ಛಲದಂಕಮಲ್ಲ'. ಯುದ್ಧದಲ್ಲಿ ಭೀಷ್ಮ, ದ್ರೋಣ, ಕರ್ಣರಂತಹ ಮಹಾವೀರರನ್ನು ಮತ್ತು ತನ್ನ ನೂರು ಜನ ಸಹೋದರರನ್ನು ಕಳೆದುಕೊಂಡರೂ ಆತ ಧೃತಿಗೆಡುವುದಿಲ್ಲ. ಕೃಷ್ಣ ಮತ್ತು ಸಂಜಯರು ಪಾಂಡವರೊಂದಿಗೆ ರಾಜಿ ಮಾಡಿಕೊಳ್ಳಲು ಸಲಹೆ ನೀಡಿದಾಗ, ಆತ ತನ್ನ ಸ್ವಾಭಿಮಾನವನ್ನು ಬಿಟ್ಟುಕೊಡಲು ನಿರಾಕರಿಸುತ್ತಾನೆ. "ಪಾಂಡವರಿಗೆ ಐದು ಹಳ್ಳಿಗಳನ್ನು ಕೊಟ್ಟು ನಾನು ಬದುಕಬೇಕೇ?" ಎಂದು ಪ್ರಶ್ನಿಸುವ ಅವನ ಮಾತುಗಳು ಅವನ ರಾಜಗಾಂಭೀರ್ಯ ಮತ್ತು ಅಪ್ರತಿಮ ಸ್ವಾಭಿಮಾನವನ್ನು ಎತ್ತಿ ತೋರಿಸುತ್ತದೆ.

ಕಳಿದಂ ದಿನಕರತನಯಂ
ಕಳಿದಂ ಯುವರಾಜನಪ್ಪ ದುಶ್ಶಾಸನನುಂ
ತುಳಿಲಾಳ್ಗಳನಿರ್ವರುಮಂ
ಕಳಿಪಿ ಸುಯೋಧನನ ಬಾಳುದಂ ನಂಬಿದಿರೇ

ಎಂದು ದುರ್ಯೋಧನ ಸಂಜಯನಿಗೆ ಮಾರುತ್ತಿರುಸುತ್ತಾನೆ. ಅದಾಗಲೇ ನಾನು ಎಲ್ಲರನ್ನು ಕಳೆದುಕೊಂಡು ಶೂನ್ಯನಾಗಿದ್ದೇನೆ. ಒಪ್ಪಂದ ಮಾಡಿಕೊಂಡು ಪಾಂಡವರ ಜೊತೆಗೆ ಆ ಕರ್ಣನಿಲ್ಲದೇ, ಆ ಅಣುಗುದಮ್ಮ ದುಶ್ಶಾಸನಿಲ್ಲದೇ ಅದು ಹೇಗೆ ನಾನು ರಾಜ್ಯಾಭಾರ ಮಾಡಲಿ, ಎಂದು ಖಡಾಖಂಡಿತವಾಗಿ ಒಪ್ಪಂದವನ್ನು ತಿರಸ್ಕಾರ ಮಾಡುತ್ತಾನೆ. ಅದು ಸಾಧ್ಯವಿಲ್ಲವೆಂದು ಅಪ್ರತಿಮ ಸ್ವಾಭಿಮಾನದ ಮಾತುಗಳು ಸುಯೋಧನನ ವೀರೋಚಿತವಾದ ನುಡಿಗಳಾಗಿವೆ.

ಆದರ್ಶ ಮಿತ್ರತ್ವ ಮತ್ತು ಉದಾತ್ತ ಗುಣ:

ದುರ್ಯೋಧನ ಮತ್ತು ಕರ್ಣನ ಸ್ನೇಹ ಜಗತ್ಪ್ರಸಿದ್ಧವಾದದ್ದು. ರನ್ನನು ಈ ಸ್ನೇಹದ ಆಳವನ್ನು ಅತ್ಯಂತ ಮಾರ್ಮಿಕವಾಗಿ ಚಿತ್ರಿಸಿದ್ದಾನೆ. ಕರ್ಣನು ರಣರಂಗದಲ್ಲಿ ಮಡಿದಾಗ ದುರ್ಯೋಧನನು ಪಡುವ ದುಃಖ ಅಪಾರ.

ನಿನ್ನೀ ಕೆಳೆಯ ಸುಯೋಧನ
ನನ್ನೊಡದೆ ನುಡಿಯದಪ್ಪಿಕೊಳ್ಳದೆ ಬೆಸನೇ
ನೆನ್ನದೆ ಜೀಯೆನ್ನದೆ ದೇ
ವೆನ್ನದದೇಕುಸಿರದಿರ್ಪೆಯಂಗಾಧಿಪತೀ.

ಎಂದು ಏಕೆ ಮಾತಾಡುತ್ತಿಲ್ಲ ಗೆಳೆಯಾ, ಕರ್ಣಾ. ಇಲ್ಲಿ ದುರ್ಯೋಧನನ ಮನಸ್ಸು ಎಷ್ಟು ಸೌಮ್ಯವಾಗಿದೆ ಎಂಬುದನ್ನು ಕಾಣಬಹುದಾಗಿದೆ. ದೇಹ ವಜ್ರದಂತೆ ಕಠೋರವಾದರು, ಹೃದಯ ಹೂವಿನಂತೆ ಕೋಮಲವಾದದ್ದನ್ನು ಇಲ್ಲಿ ನೋಡಬಹುದಾಗಿದೆ. ಹೀಗೆ ಕರ್ಣ ಮತ್ತು ಕೌರವನ ನಡುವಿನ ಸ್ನೇಹ ಅಮೋಘವಾದದ್ದಾಗಿದೆ.

"ನನಗೆ ಸಾಮ್ರಾಜ್ಯ ಮುಖ್ಯವಲ್ಲ, ಕರ್ಣನ ಸ್ನೇಹ ಮುಖ್ಯ" ಎನ್ನುವ ಅವನ ಹಂಬಲದಲ್ಲಿ ಕೃತಜ್ಞತೆ ತುಂಬಿದೆ. ಮಿತ್ರನ ಸಾವಿನ ನಂತರ ತನಗೆ ಗೆಲುವಿನ ಆಸೆಯೇ ಇಲ್ಲದಿದ್ದರೂ, ಕೇವಲ ಮಿತ್ರನ ಋಣ ತೀರಿಸಲು ಮತ್ತು ತನ್ನ ವೀರತ್ವವನ್ನು ಸಾಬೀತುಪಡಿಸಲು ಆತ ಯುದ್ಧ ಮುಂದುವರಿಸುತ್ತಾನೆ.

ದುರ್ಯೋಧನನ ವಿಲಾಪ ಮತ್ತು ಕರುಣಾರಸದ ಉತ್ತುಂಗ:

ಗದಾಯುದ್ಧದ ಅತ್ಯಂತ ಮಹತ್ವಪೂರ್ಣವಾದ ಭಾಗವೆಂದರೆ, ಅದು ದರ್ಯೋಧನನ ವಿಲಾಪ. ಯುದ್ಧಭೂಮಿಯಲ್ಲಿ ಮಡಿದು ಬಿದ್ದಿರುವ ತನ್ನ ಆಪ್ತರು ಹಾಗೂ ಸೋದರರ ಶವಗಳನ್ನು ಕಂಡು ಕೌರವೇಂದ್ರನು ಕಣ್ಣೀರು ಹಾಕುವ ದೃಶ್ಯ ಅವನೊಳಗಿನ ಮೃದು ಹಾಗೂ ಮಾನವೀಯ ಮನಸ್ಸನ್ನು ಅನಾವರಣಗೊಳಿಸುತ್ತದೆ. ಕರ್ಣನ ಶವದ ಮುಂದೆ ನಿಂತು ಆತನಾಡುವ ಮಾತುಗಳು ಸ್ನೇಹದ ಪರಾಕಾಷ್ಠೆಯಾಗಿವೆ. "ನೆತ್ತಮನಾಡುವಂದು ತಗುಳ್ಳಿದ ಕೈಯಂ..." ಎಂದು ನೆನೆಯುತ್ತಾ, ಕರ್ಣನಿಲ್ಲದ ಬಾಳು

ತನಗೆ ಶೂನ್ಯ ಎಂದು ಹಲುಬುತ್ತಾನೆ. ಕರ್ಣನಿಗಾಗಿ ಆತ ಪಡುವ ದುಃಖವು ಅವನನ್ನು ಖಳನಾಯಕನ ಸ್ಥಾನದಿಂದ ಒಬ್ಬ ಸಹೃದಯಿ ಮಿತ್ರನ ಸ್ಥಾನಕ್ಕೆ ಏರಿಸುತ್ತದೆ.

ರಕ್ತಸಿಕ್ತವಾದ ತನ್ನ ಅಣುಗುದಮ್ಮನಾದ ದುಶ್ಶಾಸನನ ಶವವನ್ನು ನೋಡಿ ಆಕ್ರಂದಿಸುವಾಗ ಹಾಗೂ ಮಗ ಲಕ್ಷಣಕುಮಾರನ ಸಾವಿಗೆ ಕರಗುವಾಗ ದುರ್ಯೋಧನನ ಆಂತರಿಕ ಪ್ರೀತಿ ಈ ಕೆಳಗಿನ ಪದ್ಯದಲ್ಲಿ ಎದ್ದು ಕಾಣುತ್ತದೆ.

ಜನನೀಸ್ತನ್ಯಮನುಂಡೆನಾಂ ಬಳಿಕೆ ನೀಂ ಸೋಮಾಮೃತಂ ದಿವ್ಯಭೋ
ಜನಮೆಂಬಿಂತಿವನುಂಡೆನಾಂ ಬಳಿಕೆ ನೀಂ ಬಾಲತ್ವದಿಂದೆಲ್ಲಿಯುಂ
ವಿನಯೋಲ್ಲಂಘನವಾದುದಿಲ್ಲ ಮರಣಕ್ಕೆನ್ನಿಂದೆ ನೀಂ ಮುಂಚಿದಯ್
ಮೊನೆಯೊಳ್ ಸೂಳ್‌ತಡಮಾಯ್ತುದೊಂದೆಡೆಯೊಳಂ ಹಾ ವತ್ಸ ದುಶ್ಶಾಸನಾ.

ಅಪ್ರತಿಮ ಗದಾವೀರ:-

ದುರ್ಯೋಧನ ಗದಾಯುದ್ಧದಲ್ಲಿ ಅಪ್ರತಿಮ ವೀರ. ಅದರಲ್ಲಿ ಎರಡು ಮಾತಿಲ್ಲ. ಆದರೆ ವೈಶಾಂಪಾಯನ ಸರೋವರದಲ್ಲಿ ಅಡಗಿ ಕುತಿರುವುದು ಏಕೆ? ಎಂಬ ಪ್ರಶ್ನೆಗೆ ವಿವಿಧ ಆಯಾಮಗಳಿಂದ ವಿಚಾರ ಮಾಡಲಾಗಿದೆ. ಆತ ಹಿರಿಯ ಕೊಟ್ಟ ಸಲಹೆಯನ್ನು ತಿರಸ್ಕಾರ ಮಾಡಬಾರದು ಎಂತಲೊ, ಅಥವಾ ತನ್ನ ಗುರು ಬಲರಾಮ ಬರುವವರೆಗಾದರೂ ಕಾಲ ಕಳೆದರೆ ಆ ಭೀಮ ಮತ್ತು ಅರ್ಜುನರನ್ನು ಕೊಂದು ಸೇಡು ತೀರಿಸಿಕೊಳ್ಳಬಹುದಲ್ಲ ಎಂಬ ಮಹತ್ವಾಕಾಂಕ್ಷೆ ಅವನದು. ಆದರೆ ವಿಧಿ ಲಿಖಿತ ಬೇರೆಯದೇ ಆಗಿದೆ. ಅವನಿಗೆ ಸೋಲು ಗದಾಯುದ್ಧದಲ್ಲಿ ಖಚಿತವಾಗುತ್ತದೆ. ಆ ಭೀಮನ ಕಟು ಮಾತುಗಳನ್ನು ಸಹಿಸದ ಕೌರವನು, ಸಿಂಹದಂತೆ ಸರೋವರದಿಂದ ಹೊರಬರುತ್ತಾನೆ. ಯುದ್ಧ ಮುಗಿದಿದೆ, ತನಗೆ ರಾಜ್ಯ ಬೇಡ ಎಂದು ಪಾಂಡವರಿಗೆ ದಾನವಾಗಿ ನೀಡಲು ಒಪ್ಪಿದರೂ, ಕ್ಷಾತ್ರತೇಜಸ್ಸನ್ನು ಬಿಟ್ಟುಕೊಡುವುದಿಲ್ಲ. ಭೀಮನೊಂದಿಗಿನ ಅಂತಿಮ ಗದಾಯುದ್ಧದಲ್ಲಿ ಆತನ ವೀರಾವೇಶ ಹಾಗೂ ರಣಕೌಶಲವು ರನ್ನನ ಶಕ್ತಿಯುತ ಶೈಲಿಯಲ್ಲಿ ಅದ್ಭುತವಾಗಿ ಮೂಡಿಬಂದಿದೆ.

ರನ್ನನ ಮಾನಸಿಕತೆ:-

ರನ್ನನು ಒಬ್ಬ ಶ್ರೇಷ್ಠ ಮನಃಶಾಸ್ತ್ರಜ್ಞನಂತೆ ದುರ್ಯೋಧನನ ಪಾತ್ರವನ್ನು ಸೃಷ್ಟಿಸಿದ್ದಾನೆ. ಸಾಯುವ ಮುನ್ನ ಅಶ್ವತ್ಥಾಮನು ಉಪಪಾಂಡವರನ್ನು ಕೊಂದ ವಿಷಯ ತಿಳಿದಾಗ, ಅಧರ್ಮದಿಂದ ಗೆಲ್ಲುವ ಈ ಕೃತ್ಯ ದುರ್ಯೋಧನನಿಗೆ ಇಷ್ಟವಾಗುವುದಿಲ್ಲ. ತಪ್ಪು ಕಲ್ಪನೆಯಿಂದ ತನ್ನ ಶತ್ರುಗಳಾದ ಪಾಂಡವರೇ ಸತ್ತರು ಎಂದು ಭಾವಿಸಿ ಆತ ನಿಟ್ಟುಸಿರು ಬಿಡುವ ಸನ್ನಿವೇಶವು ಒಬ್ಬ ದುರಂತ ನಾಯಕನ ಕೊನೆಯ ಕ್ಷಣದ ಮಾನಸಿಕ ದ್ವಂದ್ವಗಳನ್ನು ಸೂಕ್ಷ್ಮವಾಗಿ ತೋರ್ಪಡಿಸುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ, ರನ್ನನ ಗದಾಯುದ್ಧದ ದುರ್ಯೋಧನನು ಕೇವಲ ತಪ್ಪುಗಳ ಮೂಟೆಯಲ್ಲ. ಆತನಲ್ಲಿ ಅಹಂಕಾರ, ಹಠಗಳಿದ್ದರೂ ಅವುಗಳಿಗಿಂತ ಮಿಗಿಲಾಗಿ ಸ್ವಾಭಿಮಾನ, ಸ್ನೇಹಪರತೆ ಮತ್ತು ವೀರತ್ವ ಎದ್ದು ಕಾಣುತ್ತವೆ. ರನ್ನನ ಲೇಖನಿಯ ಸ್ಪರ್ಶದಿಂದಾಗಿ ದುರ್ಯೋಧನನು ಖಳನಾಯಕನಾಗಿ ಉಳಿಯದೆ, ಪ್ರತಿನಾಯಕನನ್ನಾಗಿ, ಓದುಗರಲ್ಲಿ ದುರ್ಯೋಧನನ ಬಗ್ಗೆ

ಸಹಾನುಭೂತಿಯನ್ನುಂಟು ಮಾಡಿದ್ದಾನೆ. ಕರುಣೆ ಮತು ಗೌರವವನ್ನು ಹುಟ್ಟಿಸುವ ಜಗತ್ತಿನ ಸಾಹಿತ್ಯದ ಅತ್ಯುತ್ತಮ 'ದುರಂತ ನಾಯಕ'ರಲ್ಲಿ ಒಬ್ಬನನ್ನಾಗಿಸಿ ಅಮರನನ್ನಾಗಿಸಿದ್ದಾನೆ.

ಆಕರ ಗ್ರಂಥಗಳು:

1. ಕನ್ನಡ ಸಾಹಿತ್ಯ ಚರಿತೆ., (ಲೇ)., ರಂ.ಶ್ರೀ.ಮುಗಳಿ., ಸಮಾಜ ಪುಸ್ತಕಾಲಯ, ಧಾರವಾಡ, 2019.

2. ಕನ್ನಡ ಸಾಹಿತ್ಯ ಚರಿತೆ., (ಲೇ)., ತ.ಸು.ಶಾಮರಾಯ., ಕನ್ನಡ ಸಾಹಿತ್ಯ ಪರಿಷತ್ತು., ಬೆಂಗಳೂರು, 2012.

3. ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆ., (ಲೇ)., ಡಾ.ಇಮಾಮ್ ಸಾಹೇಬ್ ಹಡಗಲಿ ಮತ್ತು ಮಹಾಂತಪ್ಪ ಕೊಡಗಲಿ., ಶಂಕರ ಪ್ರಕಾಶನ, ಮುದೇನೂರು, 2023.

4. ಕವಿಚಕ್ರವರ್ತಿ ಕವಿರನ್ನ ವಿರಚಿತಂ ಸಾಹಸಭೀಮ ವಿಜಯಂ(ಗದಾಯುದ್ಧಂ)., (ಲೇ)., ಆರ್.ವಿ.ಕುಲಕರ್ಣಿ., ಕನ್ನಡ ಸಾಹಿತ್ಯ ಪರಿಷತ್ತು., ಬೆಂಗಳೂರು, 2017.

5. ಚಂಪೂ ಕವಿಗಳು.,(ಲೇ)., ಡಾ. ಪಿ.ವಿ.ನಾರಾಯಣ., ಸಪ್ನಾ ಬುಕ್ ಹೌಸ್, ಬೆಂಗಳೂರು, 1975.